ಎಲ್ಲವೂ ಸಿನಿಮಾದ ಭಾವಪರಿಧಿಯನ್ನು ವಿಸ್ತರಿಸಿವೆ. ನಗಿಸಿ ಸುಮ್ಮನಾಗುವ ಚಿತ್ರ ಇದಾಗದೇ ಇರುವುದು ಇಂಥ ಸೂಕ್ಷ್ಮಗಳಿಂದ.

ಚಿತ್ರದ ನಿರ್ಮಾಪಕರಲ್ಲಿ ಒಬ್ಬರಾಗಿರುವ ಲಜಾರ್ ರಿಸ್ಟೊವ್ಸ್ಕಿ, ಇಲಿಜ ಪಾತ್ರವನ್ನು ಇಂಚಿಂಚಾಗಿ ಅನುಭವಿಸಿದ್ದಾರೆ. ಅವರು ನಟಿಸಿದ್ದಾರೆ ಎಂದೆನಿಸುವುದೇ ಇಲ್ಲ, ವರ್ತಿಸಿದ್ದಾರೆ ಎನ್ನುವುದೇ ಸೂಕ್ತ. ಗಾಂಭೀರ್ಯದಲ್ಲಿ ಅದ್ದಿ ತೆಗೆದಂಥ ಚಹರೆ, ಕಣ್ಣಿನಲ್ಲೇ ವ್ಯಕ್ತಗೊಳ್ಳುವ ಭಾವನೆಗಳು, ತುಮುಲದ ಗೆರೆಗಳ ತುಳುಕಿಸುವ ಆಂಗಿಕ ಅಭಿನಯಕ್ಕೆ ಶಹಬ್ಬಾಸ್ ಹೇಳಲೇಬೇಕು. ಸಿಮ ಪಾತ್ರಧಾರಿ ಪೆಟರ್ ಕೊರಾಕ್ ಕೂಡ ಸವಾಲಿನ ಪಾತ್ರವನ್ನು ಜೀವಿಸಿದ್ದಾರೆ. ನಗು, ಅಳು, ಹಟ, ಸಂದಿಗ್ಧ ಎಲ್ಲ ಭಾವಗಳಿಗೆ ಅವರ ಬಿಳಿಚಿಕೊಂಡ ವದನ ‘ಕ್ಯಾನ್ವಾಸ್’ ಆಗಿದೆ. ಚಿತ್ರದಲ್ಲಿನ ಸ್ತ್ರೀ ಪಾತ್ರಗಳಿಗೆ ದಕ್ಕಿರುವ ತೂಕ ಕೂಡ ಮೆಚ್ಚತಕ್ಕ ಅಂಶ. ವೃತ್ತಿಪ್ರೀತಿ, ನೊಂದ ಹೃದಯಗಳಿಗೆ ಮುಲಾಮು ಹಚ್ಚುವ ಮಾತೃತ್ವ, ಸಹಜ ಕಾಳಜಿ ಹೊಮ್ಮಿಸುವ ಪಾತ್ರಗಳವು. ಸಿಮ ಹಾಗೂ ಅವನ ಮನದನ್ನೆಯ ಸರಸ ದೃಶ್ಯ ಕೂಡ ಔಚಿತ್ಯಕ್ಕೆ ಹೊರತಾಗಿಲ್ಲ.

ಅಪರೂಪದ ವಸ್ತುವೊಂದನ್ನು ಸಿನಿಮಾ ಮಾಡಲಿಕ್ಕೆ ಆಯ್ಕೆ ಮಾಡಿಕೊಂಡ ಮಿಲೋಸ್ ರ್‍ಯಾಡೋವಿಕ್ ಅವರಿಗೆ ‘ನಮೋ ನಮೋ’ ಎನ್ನಬೇಕು.

✷

ಕುತೂಹಲ ಕೆರಳಿಸುವ ಚಿತ್ರದ ಅಂತಿಮ ದೃಶ್ಯ

